> ನಮಗೆಲ್ಲರಿಗೂ ಯಾರೋ ಆಡಲು ಕೆಲವೊಂದು ಕಾರ್ಡುಗಳನ್ನು ಹಂಚಿದ್ದಾರೆ. ಅವುಗಳನ್ನೇ ಬಳಸಿ ಆಟ ಆಡಬೇಕು. ಪ್ರತಿಯೊಂದು ಕಾರ್ಡೂ ನಿರ್ಬಂಧವೇ! ಯಾವ ಲೇಖಕನಿಗೆ ನಿರ್ಬಂಧಗಳಿಲ್ಲ?

◆ **ನಿಮ್ಮ ಸುಪ್ರಸಿದ್ಧ ಕಾದಂಬರಿ 'ಎಂ ಅಂಡ್ ದಿ ಬಿಗ್ ಹೂಂ' ನನ್ನ ಅತ್ಯಂತ ಇಷ್ಟದ ಕಾದಂಬರಿ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ಅದು ನಿಮಗೆ ತಂದು ಕೊಟ್ಟಿತು. ಆ ಪುಸ್ತಕದಿಂದ ನಿಮಗೆ ಸಿಕ್ಕ ಪ್ರಭೆಯನ್ನು ಈಗ ಹೇಗೆ ನಿರ್ವಹಿಸುತ್ತಿರುವಿರಿ?**

ನನ್ನ ಕಾದಂಬರಿ 'ಮರ್ಡರ್ ಇನ್ ದಿ ಮಾಹೇಮ್' ಬಂದಾಗ, ಓದುಗರು ಅದು 'ಎಂ ಅಂಡ್ ದಿ ಬಿಗ್ ಹೂಂ' ಅಲ್ಲ ಅಂತ ಮೂಗು ಮುರಿದರು. ಅಂದರೆ ಅದರಷ್ಟು ಚೆನ್ನಾಗಿಲ್ಲ ಅಂತ ಅವರ ತಕರಾರು. ನಾನು 'ಹೌದು. ಅದಕ್ಕೇ ಅದನ್ನು ಎಂ ಅಂಡ್ ದಿ ಬಿಗ್ ಹೂಂ – ಭಾಗ 2 ಅಂತ ಕರೆಯಲಿಲ್ಲ' ಎಂದು ಹೇಳಿದೆ. ಓದುಗರ ನಿರೀಕ್ಷೆ ತುಂಬಾ ದೊಡ್ಡದಿದೆ ಎಂದು ನನಗೆ ಗೊತ್ತು. ಆದರೆ ನನ್ನೆಲ್ಲಾ ಬದುಕನ್ನು ಸ್ವಾತಂತ್ರ್ಯ ಗಳಿಸುವುದಕ್ಕಾಗಿ ವ್ಯಯಿಸಿದ್ದೇನೆ. ಹಾಗಿರುವಾಗ ಕಾದಂಬರಿಯೊಂದು ನನ್ನನ್ನು ತನ್ನ ಪ್ರಭೆಯ ಪಂಜರದಲ್ಲಿ ಬಂಧಿಸಲು ಬಿಡುವುದಿಲ್ಲ. ನನಗೆ ಇಷ್ಟವಾದ ಬೇರೆ ಕೆಲಸವನ್ನು ಮಾಡಲು ಸ್ವಾತಂತ್ರ್ಯ ಉಳಿಸಿಕೊಳ್ಳುತ್ತೇನೆ. ನೀವು ನನ್ನ ಬೇರೆ ಬರವಣಿಗೆಗಳಿಂದ ನಿರಾಶರಾಗುತ್ತಲೇ ಇರುವಿರಾದರೆ, ಬೇರೆಯವರ ಸಾಹಿತ್ಯವನ್ನು ಓದಿರಿ ಎಂದು ಅವರಿಗೆ ವಿನಮ್ರನಾಗಿ ಹೇಳುತ್ತೇನೆ.

◆ **ನಮ್ಮ ಹಿರಿಯ ಸಾಹಿತಿ ದಿವಂಗತ ಯು.ಆರ್. ಅನಂತಮೂರ್ತಿಯವರು ನಮಗೊಂದು ಕಿವಿಮಾತನ್ನು ಹೇಳುತ್ತಿದ್ದರು. 'ಹಳೆಯ ಓದುಗರನ್ನು ಸಂತೃಪ್ತಗೊಳಿಸುತ್ತಾ ಕೂಡಬೇಡ. ಹೊಸ ಪುಸ್ತಕದಿಂದ ಅವರನ್ನು ನಿರಾಸೆಗೊಳಿಸು. ಆಗ ನಿನಗೆ ಹೊಸ ಓದುಗರು ಸಿಗುತ್ತಾರೆ' ಅಂತ.**

ತುಂಬಾ ಒಳ್ಳೆಯ ಮಾತು. ಎಲ್ಲಿಯಾದರೂ ಅದನ್ನು ನಾನು ಕೋಟ್ ಮಾಡುತ್ತೇನೆ.

◆ **ಒಂದು ಕಡೆಯ ಪ್ರಶ್ನೆ. ಸಾಕಷ್ಟು ದ್ವೇಷವು ನಮ್ಮ ಜನರ ನಡುವೆ ಹರಿದಾಡುತ್ತಿದೆ. ಸಾಮಾಜಿಕ ಜಾಲತಾಣಗಳೇ ಆಗಲಿ, ಪತ್ರಿಕೆಗಳೇ ಆಗಲಿ, ರಾಜಕೀಯ ವಲಯವೇ ಆಗಲಿ... ಈ ದ್ವೇಷದ ಬೇರುಗಳು ಯಾವವು? ಎಲ್ಲಿಂದ ಅವು ಹುಟ್ಟುತ್ತಿವೆ?**

ದ್ವೇಷ ಮಾಡುವುದು ಅತ್ಯಂತ ಸುಲಭದ ಆಯ್ಕೆ. ಅದು ನಿಜಕ್ಕೂ ಭಯದ ಮತ್ತೊಂದು ರೂಪ. ನೀವು ಭಯವನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿದಾಗ ಅಲ್ಲಿ ದುಃಖವಿರುತ್ತದೆ. ನಮ್ಮಲ್ಲಿ ನಮಗೆ ಗೊತ್ತಿಲ್ಲದ ಭಯ ಮತ್ತು ದುಃಖಗಳಿರುತ್ತವೆ. ಮತ್ತೊಬ್ಬರನ್ನು ದ್ವೇಷಿಸುವುದರ ಮೂಲಕ ಅದನ್ನು ಹೊರಹಾಕಿ, ಅವನ್ನು ಶಮನಗೊಳಿಸಲು ಪ್ರಯತ್ನಿಸುತ್ತೇವೆ. ಒಮ್ಮೆ ಈ ದುಃಖ ಮತ್ತು ಭಯವನ್ನು ಅರ್ಥ ಮಾಡಿಕೊಂಡರೆ ದ್ವೇಷ ಮಾಡದೆ ಬದುಕಬಹುದು. ಆದರೆ ದ್ವೇಷ ಮಾಡದೆ ಬದುಕುವುದು ಅತ್ಯಂತ ಕಷ್ಟದ ಆಯ್ಕೆ. ಕೆಲವೊಮ್ಮೆ ಈ ಬಲಪಂಥೀಯ ರಾಜಕೀಯ ನಾಯಕರನ್ನು ದ್ವೇಷ ಮಾಡುವುದು ಅತ್ಯಂತ ಸುಲಭ ಅನ್ನಿಸುತ್ತೆ. ಆದರೆ ಅದರ ಮೂಲ ಬೇರುಗಳು ನನ್ನೊಳಗೇ ಇರುತ್ತವೆ. ಏನನ್ನೋ ಎದುರಿಸಲು ಹಿಂಜರಿಯುತ್ತಿದ್ದೇನೆ, ಯಾವುದೋ ದುಃಖದಿಂದ ಬಳಲುತ್ತಿದ್ದೇನೆ ಎನ್ನುವುದನ್ನು ಕಂಡುಕೊಳ್ಳಬೇಕು. ಈ ದ್ವೇಷ ನಮ್ಮನ್ನು ಬೆಳೆಯಲು ಬಿಡುವುದಿಲ್ಲ. ಭಯ ನಮ್ಮ ವ್ಯಕ್ತಿತ್ವವನ್ನು ಸಂಕುಚಿತಗೊಳಿಸುತ್ತದೆ. ದುಃಖಶಮನ ನಮ್ಮ ಮಾನವೀಯತೆಯನ್ನು ಬೆಳೆಸುತ್ತದೆ. ಈ ಸಂಗತಿಯನ್ನು ಯಾರಾದರೂ ಹಿಂದೂ ಗೆಳೆಯರ ಬಳಿ ಹೇಳಿದರೆ, 'ಜೆರ್ರಿ, ಇದು ನಮಗೆ ಗೊತ್ತು. ನಮ್ಮ ಧರ್ಮದಲ್ಲಿ ಇದೆಲ್ಲಾ ಇದೆ' ಎನ್ನುತ್ತಾರೆ. ಅವರ ಮಾತು ಸತ್ಯವೇ ಆಗಿದೆ. ಆದರೆ ನಾವು ಆ ಧರ್ಮವನ್ನು ಎಷ್ಟು ಪಾಲಿಸುತ್ತಿದ್ದೇವೆ?

●